ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ವಿಷಯ: ಕಾರ್ಕಳ 220ಕೆ.ವಿ ಉಪಕೇಂದ್ರ ಹಾಗೂ ವಿಭಾಗೀಯ ಕಚೇರಿ ಆವರಣದಲ್ಲಿನ ಕವಿಪ್ರನಿನಿ ಜಾಗದಲ್ಲಿ ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ರವರ ವಿತರಣಾ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕವನ್ನು ಸ್ಥಾಪಿಸಲು 1-00 ಎಕರೆ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

ಓದಿದೆ:
1. ವ್ಯನಿ, ಕವಿಕಾ ರವರು ವ್ಯನಿ, ಕವಿಪ್ರನಿನಿ ರವರಿಗೆ ಬರೆದ ಪತ್ರ ಸಂಖ್ಯೆ: ಕವಿಕಾ/ವ್ಯನಿ/2021-22/028 ದಿನಾಂಕ 09/02/2022.
2. ವ್ಯನಿ, ಕವಿಕಾ ರವರು ಅಪರ ಮುಖ್ಯ ಕಾಯದರ್ಶಿಗಳು, ಇಂಧನ ಇಲಾಖೆ ರವರಿಗೆ ಬರೆದ ಪತ್ರ ಸಂಖ್ಯೆ: ಕವಿಕಾ/ವ್ಯನಿ/2021-22/027 ದಿನಾಂಕ 20/01/2022.
3. ಮು.ಇಂ(ವಿ)/ಪ್ರ.ವ/ಹಾ/ಕಾ.ನಿ.ಇಂ(ಸಿ)2021-22/17109-11 ದಿನಾಂಕ 18/02/2022.
4. ದಿನಾಂಕ 18/04/2022 ರಂದು ನಡೆದ 130 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯ ನಡವಳಿಗಳು.

**ಪೀಠಿಕೆ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ, ಬೆಂಗಳೂರು ರವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ರವರಿಗೆ ಬರೆದ ದಿನಾಂಕ 20/01/2022 ರ ಪತ್ರದಲ್ಲಿ, ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ನಿರ್ದೇಶನದ ಮೇರೆಗೆ ಉಡುಪಿ ಜಿಲ್ಲೆಯಲ್ಲಿ ವಿದ್ಯುತ್ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕವನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ಸದರಿ ಘಟಕವನ್ನು ಸ್ಥಾಪಿಸಲು ಕಾರ್ಕಳ 220ಕೆ.ವಿ ಉಪಕೇಂದ್ರದ ಆವರಣದಲ್ಲಿ 1-00 ಎಕರೆ ಜಾಗವನ್ನು ಕವಿಪ್ರನಿನಿಯಿಂದ ಪಡೆಯಬೇಕಾಗುವುದೆಂದು ಸಹ ವರದಿ ನೀಡಿರುತ್ತಾರೆ.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ರವರು ದಿನಾಂಕ 09/02/2022 ರ ಪತ್ರದಲ್ಲಿ ಕಾರ್ಕಳ 220ಕೆ.ವಿ ಉಪಕೇಂದ್ರ ಹಾಗೂ ವಿಭಾಗೀಯ ಕಚೇರಿ ಆವರಣದಲ್ಲಿನ ಕವಿಪ್ರನಿನಿ ಜಾಗದಲ್ಲಿ ವಿತರಣಾ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕವನ್ನು ಸ್ಥಾಪಿಸಲು 1-00 ಎಕರೆ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಕೋರಿರುತ್ತಾರೆ.

3. ಕಾರ್ಕಳ 220ಕೆ.ವಿ ಉಪಕೇಂದ್ರ ಹಾಗೂ ವಿಭಾಗೀಯ ಕಚೇರಿ ಆವರಣದಲ್ಲಿ ಕಾರ್ಕಳ ಹೋಬಳಿ, ನಿಟ್ಟೆ ಹಾಗೂ ಸಾಣೂರು ಗ್ರಾಮಗಳ ಹಲವಾರು ಸರ್ವೆ ಸಂಖ್ಯೆಗಳಲ್ಲಿ ಒಟ್ಟು 29ಎ-11ಗು ಜಮೀನು ಕವಿಪ್ರನಿನಿಯ ಒಡೆತನದಲ್ಲಿರುತ್ತದೆ. ಸದರಿ ಜಮೀನುಗಳನ್ನು 1977 ರಿಂದ 1999 ರ ಅವಧಿಯಲ್ಲಿ ಭೂ ಸ್ವಾಧೀನದ ಮೂಲಕ ಪಡೆಯಲಾಗಿದೆ.

4. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರು ದಿನಾಂಕ 18/02/2022 ರ ಪತ್ರದಲ್ಲಿ ಕಾರ್ಕಳ 220ಕೆ.ವಿ ಉಪಕೇಂದ್ರ ಹಾಗೂ ವಿಭಾಗೀಯ ಕಚೇರಿಯ ಆವರಣದಲ್ಲಿನ ಕಾರ್ಕಳ ಹೋಬಳಿ, ನಿಟ್ಟೆ ಗ್ರಾಮದ ಸರ್ವೆ ಸಂಖ್ಯೆ 481/2ಬಿ ರಲ್ಲಿ 1.40 ಎಕರೆ ಜಮೀನು ಲಭ್ಯವಿರುವುದಾಗಿ ಹಾಗೂ ಸದರಿ ಜಾಗವು ಮುಂದಿನ ದಿನಗಳಲ್ಲಿ ವಿಭಾಗೀಯ ಕಚೇರಿ ವಿಸ್ತರಣೆ ಅಥವಾ ಇನ್ನಿತರ ಉದ್ದೇಶಕ್ಕೆ ಅವಶ್ಯಕವಿಲ್ಲವೆಂದು ಸದರಿ ಜಾಗವನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆಯ ಉದ್ದೇಶಿತ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕ ಸ್ಥಾಪಿಸಲು ನೀಡಬಹುದೆಂದು ತಿಳಿಸಿರುತ್ತಾರೆ.

5. ಸದರಿ ಜಾಗದ ಇತ್ತೀಚಿನ ಮಾರ್ಗಸೂಚಿ ಬೆಲೆ ಚದುರ ಮೀಟರ್ ಗೆ ರೂ.1,100/- ರಂತಿದ್ದು, ಒಟ್ಟು 1-00 ಎಕರೆ ಜಮೀನಿನ ಒಟ್ಟು ಮಾರ್ಗಸೂಚಿ ಬೆಲೆ ರೂ.44,51,557/- ಗಳಾಗಿರುತ್ತದೆ. ಸದರಿ ಜಾಗವನ್ನು ಲೀಸ್ ಆಧಾರದ ಮೇಲೆ ವಾರ್ಷಿಕ ಲೀಸ್ ಮೊತ್ತ ಶೇಕಡಾ 7 ರಂತೆ ಲೆಕ್ಕಿಸಿದ್ದಲ್ಲಿ ರೂ.3,67,700/- ಗಳಾಗುತ್ತದೆ (ಶೇಕಡಾ 18 ರಷ್ಟು ಜಿಎಸ್‌ಟಿ ಸೇರಿ).

6. ಸದರಿ ಜಾಗ ಕವಿಪ್ರನಿನಿಗೆ ಅವಶ್ಯಕವಿಲ್ಲದ ಕಾರಣ ಹಾಗೂ ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ ರವರು ವಿತರಣಾ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕ ಸ್ಥಾಪಿಸಲು ಕಾರ್ಕಳ 220ಕೆ.ವಿ ಉಪಕೇಂದ್ರ ಹಾಗೂ ವಿಭಾಗೀಯ ಕಚೇರಿ ಆವರಣದಲ್ಲಿ ಜಾಗದ ಅವಶ್ಯಕವಿದೆಯೆಂದು ಕೋರಿರುವ ಹಿನ್ನೆಲೆಯಲ್ಲಿ, ಸದರಿ ಆವರಣದ ನಿಟ್ಟೆ ಗ್ರಾಮ ಸರ್ವೆ ಸಂಖ್ಯೆ 481/2ಬಿ ರಲ್ಲಿ 1-00 ಎಕರೆ ಜಮೀನನ್ನು ವಾರ್ಷಿಕ ಲೀಸ್ ಮೊತ್ತ ರೂ.3,67,700/- (18% ಜಿಎಸ್‌ಟಿ ಸೇರಿ) ಗಳಂತೆ 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ನೀಡುವ ಹಾಗೂ ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಕ್ಕೊಮ್ಮೆ ಅಂದಿನ ಮಾರ್ಗಸೂಚಿ ದರದನ್ವಯ ಶೇಕಡಾ 7 ರಂತೆ ಪರಿಷ್ಕರಿಸುವ ಷರತ್ತಿಗೊಳಪಟ್ಟು, ಲೀಸ್ ಆಧಾರದ ಮೇಲೆ ನೀಡುವ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿತ್ತು.

7. ಕವಿಪ್ರನಿನಿ ಮಂಡಳಿ ಸಭೆಯಲ್ಲಿ ಸದರಿ ಪ್ರಸ್ತಾವನೆಯ ಮೇಲೆ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ.

*"RESOLVED THAT for the reasons explained, approval be and is hereby accorded to spare the identified KPTCL's land of 1-00 acre in survey No. 481/2B of Nitte Village to M/s. Karnataka Vidyuth Karkhane Limited for the period 30 (thirty) years on annual lease basis at 7% of the guidance value [present lease amount being Rs.3,67,000/- (including GST @ 18%)] with a condition of revision of annual lease amount every five years at 7% of the prevailing guidance value for establishing distribution transformer manufacture and repair unit, at 220kV station and division office premises, Karkala.*

*FURTHER RESOLVED THAT the Director (Admin &HR), KPTCL be and is hereby authorised to issue necessary orders accordingly".*

8. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ7/21354/21-22/ಬೆಂಗಳೂರು** **ದಿನಾಂಕ 20/06/2022**

ದಿನಾಂಕ 18/04/2022 ರ 130 ನೇ ಕವಿಪ್ರನಿನಿ ಮಂಡಳಿ ಸಭೆಯ ನಡವಳಿಯನ್ವಯ ಕಾರ್ಕಳ 220ಕೆ.ವಿ ಉಪಕೇಂದ್ರ ಹಾಗೂ ವಿಭಾಗೀಯ ಕಚೇರಿ ಆವರಣದಲ್ಲಿ 1-00 ಎಕರೆ ಜಾಗವನ್ನು ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ರವರ ವಿತರಣಾ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕವನ್ನು ಸ್ಥಾಪಿಸಲು ಈ ಕೆಳಕಂಡ ಷರತ್ತುಗಳನ್ವಯ ಲೀಸ್ ಆಧಾರದ ಮೇಲೆ ನೀಡಲು ಆದೇಶಿಸಲಾಗಿದೆ.

1. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರ ದಿನಾಂಕ 18/02/2022 ರ ಪ್ರಸ್ತಾವನೆಯಲ್ಲಿನ ನಕಾಶೆಯಲ್ಲಿ ಗುರುತಿಸಿದಂತೆ ನಿಟ್ಟೆ ಗ್ರಾಮದ ಸರ್ವೆ ಸಂಖ್ಯೆ 481/2ಬಿ ರಲ್ಲಿ 1-00 ಎಕರೆಗೆ ಮೀರದಂತೆ ಜಾಗವನ್ನು ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ರವರಿಗೆ ವಿದ್ಯುತ್ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕಗಳನ್ನು ಸ್ಥಾಪಿಸಲು ನೀಡುವುದು.

2. ಸದರಿ ಜಾಗದ ಇತ್ತೀಚಿನ ಮಾರ್ಗಸೂಚಿ ಬೆಲೆ ಚದುರ ಮೀಟರ್ ಗೆ ರೂ.1,100/- ಗಳಂತೆ 1-00 ಎಕರೆ ಜಮೀನಿನ ಮಾರ್ಗಸೂಚಿ ಬೆಲೆಯ ಶೇಕಡಾ 7 ರಂತೆ ವಾರ್ಷಿಕ ಲೀಸ್ ಮೊತ್ತ ರೂ.3,67,700/- ಗಳಂತೆ (ಶೇಕಡಾ 18 ರಷ್ಟು ಜಿಎಸ್ ಟಿ ಸೇರಿ) ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ಗೆ 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ನೀಡುವುದು.

3. ಸದರಿ ಲೀಸ್ ಮೊತ್ತವನ್ನು ಒಪ್ಪಂದದ ಕರಾರಿನ ದಿನದಿಂದ ಪ್ರತಿ 5 ವರ್ಷಕ್ಕೊಮ್ಮೆ ಅಂದಿನ ಮಾರ್ಗಸೂಚಿ ದರದನ್ವಯ ಶೇಕಡಾ 7 ರಂತೆ ವಾರ್ಷಿಕ ಲೀಸ್ ಮೊತ್ತವನ್ನು ಪರಿಷ್ಕರಿಸಿ, ನಿಗದಿಪಡಿಸುವುದು.

4. ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ಗೆ ನೀಡಲು ಅನುಮೋದಿಸಿರುವ ಜಾಗವನ್ನು, ವಿದ್ಯುತ್ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕಗಳನ್ನು ಸ್ಥಾಪಿಸಲು ಮಾತ್ರ ಉಪಯೋಗಿಸುವುದು ಹಾಗೂ ಬೇರೆ ಯಾವುದೇ ಉದ್ದೇಶಕ್ಕೆ ಬಳಸಬಾರದೆಂಬ ಷರತ್ತನ್ನು ವಿಧಿಸುವುದು.

5. ಉದ್ದೇಶಿತ ವಿದ್ಯುತ್ ಪರಿವರ್ತಕಗಳ ತಯಾರಿಕಾ ಮತ್ತು ದುರಸ್ತಿ ಘಟಕಗಳ ನಿರ್ಮಾಣ ಕಾಮಗಾರಿಯನ್ನು ಗರಿಷ್ಠ 3 ವರ್ಷಗಳ ಅವಧಿಯಲ್ಲಿ ಪ್ರಾರಂಭಿಸದಿದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

6. ನಿಗಮವು ಲೀಸ್ ನೀಡಲು ಅನುಮೋದಿಸಿರುವ ಜಾಗವನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ಗೆ ಸೂಚಿಸುವುದು.

7. ನಿಗಮವು ಮೆ॥ ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ಗೆ ಲೀಸ್ ಆಧಾರದಲ್ಲಿ ನೀಡಲಾಗುವ ಜಾಗದ ಆಸ್ತಿ ತೆರಿಗೆ/ ಸ್ಥಳೀಯ ಸಂಸ್ಥೆಗಳು ವಿಧಿಸುವ ತೆರಿಗೆ/ಶಾಸನಬದ್ಧ ಶುಲ್ಕ ಇತ್ಯಾದಿಗಳನ್ನು ಆಯಾ ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗಳಿಗೆ, ಲೀಸ್ ಅವಧಿಯಲ್ಲಿ ಕಾಲಕಾಲಕ್ಕೆ ಪಾವತಿಸುವಂತೆ ಷರತ್ತು ವಿಧಿಸುವುದು.

8. ಲೀಸ್ ಆಧಾರದ ಮೇಲೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

ಆದೇಶದ ಮೇರೆಗೆ

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ), ಮೈಸೂರು ರಸ್ತೆ, ಬೆಂಗಳೂರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
3. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ)/(ಟಿಎ ಮತ್ತು ಕ್ಯೂಸಿ), ಕವಿಪ್ರನಿನಿ, ಬೆಂಗಳೂರು.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಮಂಗಳೂರು.
7. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
8. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
9. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
10. ಲೆಕ್ಕ ನಿಯಂತ್ರಣಾಧಿಕಾರಿ (ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ಕವಿಪ್ರನಿನಿ, ಕೇಮಾರ್-ಕಾರ್ಕಳ.
12. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
13. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
14. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
15. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

---

ವಿಷಯ: ರಾಯಚೂರು ಹಾಗೂ ಚಾಮರಾಜನಗರ (ದೊಡ್ಡರಾಯಪೇಟೆ) ಗಳಲ್ಲಿನ ಕವಿಪ್ರನಿನಿ 220ಕೆ.ವಿ ಉಪಕೇಂದ್ರಗಳ ಆವರಣದಲ್ಲಿ ಕವಿಪ್ರನಿನಿ ನೌಕರರ ಸಂಘದ ಸಮುದಾಯ ಭವನಗಳನ್ನು ನಿರ್ಮಿಸಲು ನಿಗಮದ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಕೋರಿರುವ ಬಗ್ಗೆ.

ಓದಿದೆ:
1. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು ರವರ ಪತ್ರ ಸಂಖ್ಯೆ: ಕವಿಪ್ರನಿನಿ.ನೌ.ಸ/663/2011-12 ದಿನಾಂಕ 19/09/2011.
2. ಸಂಘಟನಾ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ, ರಾಯಚೂರು ರವರ ಪತ್ರ ಸಂಖ್ಯೆ: ಕವಿಪ್ರನಿನಿ ನೌ.ಸ/ಸಂ.ಕಾ/ರಾ/2021-22/113-22 ದಿನಾಂಕ 17/09/2021.
3. ಮು.ಇಂ (ವಿ)/ಪ್ರ.ವ/ಗು/ಸಿವಿಲ್/2021-22/12146-49 ದಿನಾಂಕ 05/01/2022.
4. ಮು.ಇಂ (ವಿ)/ಪ್ರ.ವ/ಕಾ.ನಿ.ಇಂ(ಸಿ)/ಮೈ2020-21/11959-61 ದಿನಾಂಕ 24/03/2021.
5. ದಿನಾಂಕ 18/04/2022 ರಂದು ನಡೆದ 130 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯ ನಡವಳಿಗಳು.

**ಪ್ರಸ್ತಾವನೆ:**

1. ಕವಿಪ್ರನಿನಿ ನೌಕರರ ಸಂಘವು ರಾಯಚೂರು 220ಕೆ.ವಿ ಉಪಕೇಂದ್ರದ ಆವರಣ ಹಾಗೂ ಚಾಮರಾಜನಗರ (ದೊಡ್ಡರಾಯಪೇಟೆ) 220ಕೆ.ವಿ ಉಪಕೇಂದ್ರದ ಆವರಣಗಳಲ್ಲಿ, ಸಂಘದ ಸಮುದಾಯ ಭವನ ಕಟ್ಟಡಗಳನ್ನು ನಿರ್ಮಿಸಲು ಅನುಕ್ರಮವಾಗಿ 120 ಅಡಿ X 150 ಅಡಿ ಹಾಗೂ 150 ಅಡಿ X 200 ಅಡಿ ಅಳತೆಯ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವಂತೆ ಕೋರಿಕೆ ಸಲ್ಲಿಸಿರುತ್ತಾರೆ.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕಲಬುರಗಿ ಹಾಗೂ ಮೈಸೂರು ರವರು ರಾಯಚೂರು 220ಕೆ.ವಿ ಉಪಕೇಂದ್ರದ ಆವರಣ ಹಾಗೂ ಚಾಮರಾಜನಗರ (ದೊಡ್ಡರಾಯಪೇಟೆ) 220ಕೆ.ವಿ ಉಪಕೇಂದ್ರದ ಆವರಣಗಳಲ್ಲಿ ಕವಿಪ್ರನಿನಿ ನೌಕರರ ಸಂಘ ಕೋರಿರುವ ಜಾಗಗಳು ಕವಿಪ್ರನಿನಿಯ ಯಾವುದೆ ಅಭಿವೃದ್ಧಿ ಕಾರ್ಯಗಳಿಗೆ ಅವಶ್ಯಕತೆ ಇರುವುದಿಲ್ಲವೆಂದು ಸದರಿ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಬಹುದೆಂದು ವರದಿ ನೀಡಿರುತ್ತಾರೆ.

3. ಮುಖ್ಯ ಇಂಜಿನಿಯರ್ (ವಿ) (ಯೋ ಮತ್ತು ಸ) ರವರು ಸಹ ಸದರಿ ಉಪಕೇಂದ್ರಗಳ ಆವರಣದಲ್ಲಿ ಕವಿಪ್ರನಿನಿ ನೌಕರರ ಸಂಘ ಕೋರಿರುವ ಜಾಗಗಳು ಉಪಕೇಂದ್ರಗಳ ವಿಸ್ತರಣೆ ಹಾಗೂ ಉನ್ನತೀಕರಣಕ್ಕೆ ಅಡಚಣೆಯುಂಟಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

4. ಬೆಂಗಳೂರು ಸೇರಿದಂತೆ ಹಲವಾರು ನಗರ ಪ್ರದೇಶಗಳಲ್ಲಿ ಕವಿಪ್ರನಿನಿಯ ಎಲ್ಲಾ ಸಂಘ / ಸಂಸ್ಥೆಗಳ ಕಟ್ಟಡಗಳನ್ನು ನಿರ್ಮಿಸಲು ಜಾಗಗಳನ್ನು ಲೀಸ್ ಆಧಾರದ ಮೇಲೆ ಹಂಚಿಕೆ ಮಾಡಿದೆ. ಅಂತೆಯೆ, ಕವಿಪ್ರನಿನಿ ನೌಕರರ ಸಂಘದ ಕೋರಿಕೆಯನ್ವಯ, ರಾಯಚೂರು ಮತ್ತು ಚಾಮರಾಜನಗರ (ದೊಡ್ಡರಾಯಪೇಟೆ) 220ಕೆ.ವಿ ಉಪಕೇಂದ್ರಗಳ ಆವರಣಗಳಲ್ಲಿ 120 ಅಡಿ X 150 ಅಡಿ ಅಳತೆಯ ಜಾಗಗಳನ್ನು ಕವಿಪ್ರನಿನಿ ನೌಕರರ ಸಂಘದ ಸಮುದಾಯ ಭವನ ಕಟ್ಟಡಗಳನ್ನು ನಿರ್ಮಿಸಲು 30 ವರ್ಷಗಳ ಲೀಸ್ ಆಧಾರದ ಮೇಲೆ, ಸಾಂಕೇತಿಕವಾಗಿ ವಾರ್ಷಿಕ ಲೀಸ್ ಮೊತ್ತ ರೂ.1,000/- ಗಳಂತೆ ನೀಡುವ ಪ್ರಸ್ತಾವನೆಯನ್ನು ದಿನಾಂಕ 18/04/2022 ರಂದು ನಡೆದ 130 ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿತ್ತು.